ಹಿರೇಕೆರೂರು ತಾಲ್ಲೂಕಿನ ಕಂಡಪಲ್ಲಿ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದ ಕಟ್ಟಡದ ಕಾಮಗಾರಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1068(1418)

ಪ್ರಶ್ನೆ ಕೇಳಿದ ಸದಸ್ಯರು: ಶ್ರೀ ಬನ್ನಿಕೋಡ್.ಬಿ.ಹೆಚ್.(ಹಿರೇಕೆರೂರು)

ಉತ್ತರಿಸಬೇಕಾದ ಸಚಿವರು: ಡಾ॥ಎ.ಬಿ.ಮಾಲಕರೆಡ್ಡಿ(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಪ್ರಶ್ನೆ

ಅ) ಹಾವೇರಿ ಜಿಲ್ಲೆಯ ಹಿರೇಕೆರೂರು ತಾಲ್ಲೂಕಿನ ಕಂಡಪಲ್ಲಿ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದ ಕಟ್ಟಡದ ಕಾಮಗಾರಿ ಪ್ರಾರಂಭವಾಗಿ ಎಷ್ಟು ವರ್ಷವಾಗಿದೆ?

ಆ) ಇದರ ಅಂದಾಜು ಮೊತ್ತವೆಷ್ಟು? ಈವರೆಗೆ ಆದ ಪ್ರಗತಿ ಮತ್ತು ವೆಚ್ಚವೆಷ್ಟು?

ಇ) ಕಟ್ಟಡ ಪೂರ್ಣಗೊಳ್ಳಲು ಬೇಕಾದ ಮೊತ್ತವೆಷ್ಟು?

ಈ) ಕಟ್ಟಡದ ಕೆಲಸ ಪೂರ್ಣಗೊಳಿಸಲು ಹಣ ಒದಗಿಸಲು ಕ್ರಮ ತೆಗೆದುಕೊಳ್ಳಲಾಗಿದೆಯೇ?

ಉ) ಈ ಕಟ್ಟಡದ ಕಾಮಗಾರಿ ಪೂರ್ಣಗೊಳಿಸಲು ಸರ್ಕಾರದ ನೀತಿ ಮತ್ತು ಕ್ರಮಗಳೇನು?

ಉತ್ತರ

ಅ) 7 ವರ್ಷಗಳು

ಆ) ಅಂದಾಜು ಮೊತ್ತ ರೂ. 16.00 ಲಕ್ಷಗಳು ದಿನಾಂಕ ಡಿಸೆಂಬರ್ 2001ರವರೆಗೆ ಆದ ಒಟ್ಟು ವೆಚ್ಚ ರೂ. 13.95 ಲಕ್ಷ.

ಇ) ರೂ. 2.91 ಲಕ್ಷ

ಈ) ಪ್ರಸಕ್ತ ಸಾಲಿಗೆ ರೂ. 0.24 ಲಕ್ಷಗಳ ಅನುದಾನ ಒದಗಿಸಲ್ಪಟ್ಟಿದೆ. ಸದರಿ ಕೆಲಸ ಪೂರ್ಣಗೊಳಿಸಲು 2002-03ನೇ ಸಾಲಿನ ಕರಡು ಕ್ರಿಯಾ ಯೋಜನೆಯಲ್ಲಿ ರೂ. 2.05 ಲಕ್ಷಗಳ ಅನುದಾನವನ್ನು ಕಲ್ಪಿಸಲಾಗಿದೆ.

ಉ) ಪ್ರಸ್ತಾವಿತ ರೂ. 2.05 ಲಕ್ಷಗಳ ಅನುದಾನದ 2002-03ನೇ ಸಾಲಿನ ಕರಡು

ಕ್ರಿಯಾ ಯೋಜನೆಯು ಅನುಮೋದನೆಗೊಂಡ ನಂತರ, ಈ ಕಾಮಗಾರಿಯನ್ನು ಪೂರ್ತಿಗೊಳಿಸಲು ಹಾವೇರಿ ಜಿಲ್ಲಾ ಪಂಚಾಯ್ತಿಯನ್ನು ಕೋರಲಾಗುವುದು.

ಹಿರೇಕೆರೂರು ತಾಲ್ಲೂಕಿನಲ್ಲಿ ಸರ್ಕಾರಿ ಪ್ರೌಢಶಾಲೆ ಮಂಜೂರು ಮಾಡುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1069(1420)

ಸದಸ್ಯರ ಹೆಸರು: ಶ್ರೀ ಬನ್ನಿಕೋಡ್.ಬಿ.ಹೆಚ್(ಹಿರೇಕೆರೂರು)

ಉತ್ತರಿಸುವ ಸಚಿವರು: ಶ್ರೀ ಹೆಚ್.ವಿಶ್ವನಾಥ್(ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು)

ಪ್ರಶ್ನೆ

ಅ) ಹಾವೇರಿ ಜಿಲ್ಲೆಯ ಹಿರೇಕೆರೂರು ತಾಲ್ಲೂಕಿನ (1)ನೂಲಗೇರಿ (2)ಹುಲ್ಲತ್ತಿ (3)ಚಿಕ್ಕಯಡಚಿ (4)ಕಂಚೂರು (5) ಹಿರೇಮೊರಬ (6) ಹಿರೇಕೆರೂರು ಗ್ರಾಮಗಳಲ್ಲಿ ಸರ್ಕಾರಿ ಪ್ರೌಢಶಾಲೆಗಳನ್ನು ಸಾರ್ವಜನಿಕರ ಅನೇಕ ವರ್ಷಗಳ ಬೇಡಿಕೆಯನ್ನು ಸರ್ಕಾರ ಗಮನಿಸಿದೆಯೇ?

ಆ) ಉತ್ತರ ಕರ್ನಾಟಕದ ಹಾವೇರಿ ಜಿಲ್ಲೆಯ ಹಿರೇಕೆರೂರು ತಾಲ್ಲೂಕಿನಲ್ಲಿ ಸರ್ಕಾರಿ ಪ್ರೌಢಶಾಲೆಗಳ ಅಸಮಾನತೆಯನ್ನು ಸರಿಪಡಿಸಲು ಸರ್ಕಾರದ ಯೋಜನೆ ಕ್ರಮ ನೀತಿಯೇನು?

ಉತ್ತರ

ಅ) ಸರ್ಕಾರವು ಗಮನಿಸಿದೆ. ಅಗತ್ಯತೆಗೆ ಅನುಗುಣವಾಗಿ ಹಾವೇರಿ ಜಿಲ್ಲೆಗೆ ಕೆಳಕಂಡ ಸರ್ಕಾರಿ ಪ್ರೌಢಶಾಲೆಗಳನ್ನು ಮಂಜೂರು ಮಾಡಲಾಗಿದೆ.

(1) ಚಿಕ್ಕೆರೂರು, ಹಿರೇಕೆರೂರು ತಾಲ್ಲೂಕು

(2) ಕಾಗಿನೆಲೆ, ಬ್ಯಾಡಗಿ ತಾಲ್ಲೂಕು

(3) ಕಳಸೂರು, ಸವಣೂರು ತಾಲ್ಲೂಕು

(4) ಕುಳೇನೂರು, ಹಾವೇರಿ ತಾಲ್ಲೂಕು

(5) ಅರೆಮಾಗನೂರು, ರಾಣಿಬೆನ್ನೂರು ತಾಲ್ಲೂಕು.